ಓಎಸ್ 125/2014

ಡಿಡಬ್ಲ್ಯೂ 1

**ಸಾಕ್ಷಿಯು ದಿಃ 27.04.2026 ರಂದು ನ್ಯಾಯಾಲಯದಲ್ಲಿ ಹಾಜರಿದ್ದು ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲು: ವಾದಿಗಳ ಪರ ವಕೀಲರಿಂದ**

ನನ್ನ ಗಂಡ ಕೊಂಗಳ್ಳಿಮಲ್ಲು ರವರ ತಂದೆಯ ಹೆಸರು ಕೊಂಗಳಪ್ಪ ಆಗಿರುತ್ತದೆ. ಕೊಂಗಳಪ್ಪ ರವರ ತಂದೆಯ ಹೆಸರು ಸುಬ್ಬಪ್ಪ ಎಂದರೆ ಸರಿ. ಸುಬ್ಬಪ್ಪ ರವರಿಗೆ ಪುಟ್ಟಮಾದಪ್ಪ ಎಂಬ ಸಹೋದರ ಇದ್ದರು ಎಂದರೆ ಸರಿ. ಸದರಿ ಪುಟ್ಟಮಾದಪ್ಪ ರವರು ಮದುವೆಯಾಗದೇ ಮೃತಪಟ್ಟಿರುತ್ತಾರೆ ಎಂದರೆ ಸರಿ. ಸದರಿ ಪುಟ್ಟಮಾದಪ್ಪ ರವರಿಗೆ ವಾದಿಗಳು ಮತ್ತು ಪ್ರತಿವಾದಿಗಳಾದ ನಾವುಗಳೇ ವಾರಸುದಾರರಾಗಿರುತ್ತೇವೆ ಎಂದರೆ ಸರಿ. ಸುಬ್ಬಪ್ಪ ಮತ್ತು ಪುಟ್ಟಮಾದಪ್ಪ ರವರ ತಂದೆಯ ಹೆಸರು ಬಸಪ್ಪ ಎಂದರೆ ನನಗೆ ಗೊತ್ತಿಲ್ಲ. ದಾವ ಐಟಂ ನಂಃ 2ನೇ ಸ್ವತ್ತು ಸರ್ವೇ ನಂಬರ್ 326/1 ಪುಟ್ಟಮಾದಪ್ಪ ರವರ ಹೆಸರಿನಲ್ಲಿ ಇತ್ತು ಎಂದರೆ ಸರಿ. ಸದರಿ ಪುಟ್ಟಮಾದಪ್ಪ ರವರು ಮೃತಪಟ್ಟ ನಂತರ ಸದರಿ ದಾವ ಐಟಂ ನಂಃ 2ನೇ ಸ್ವತ್ತನ್ನು 6 ಮತ್ತು 7ನೇ ಪ್ರತಿವಾದಿಗಳ ತಂದೆ ಸುಬ್ಬಪ್ಪ ರವರ ಹೆಸರಿಗೆ ಖಾತೆ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿ.

2. ದಾವ ಐಟಂ ನಂಃ 3ನೇ ಸ್ವತ್ತು ಸರ್ವೇ ನಂಬರ್ 326/3 ನನ್ನ ಮಾವನ ತಂದೆ ಸುಬ್ಬಪ್ಪ ರವರಿಗೆ ಸೇರಿದ ಆಸ್ತಿ ಎಂದರೆ ಸರಿ. ದಾವ ಆಸ್ತಿಗಳ ಖಾತೆ ವಾದಿಗಳ ಹೆಸರಿಗಾಗಲಿ ಅಥವಾ ಅವರ ತಂದೆಯ ಹೆಸರಿನಲ್ಲಾಗಲಿ ಖಾತೆ ಇವೆಯಾ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಮ್ಮ ಪ್ರತಿವಾದ ಪತ್ರದಲ್ಲಿ ನಿಮ್ಮ ಮಾವನವರ ತಂದೆ ಸುಬ್ಬಪ್ಪ ರವರಿಗೆ ದಾವ ಆಸ್ತಿಗಳನ್ನು ಹೊರತುಪಡಿಸಿ ಇನ್ನೂ ಆಸ್ತಿಗಳು ಇವೆ ಎಂದು ತಿಳಿಸಿದ್ದು ಆ ಆಸ್ತಿಗಳ ಸರ್ವೇ ನಂಬರ್ ಮತ್ತು ವಿಸ್ತೀರ್ಣ ಏನು ಎಂಬ ಪ್ರಶ್ನೆಗೆ ಸಾಕ್ಷಿಯು ನನ್ನ ಪ್ರತಿವಾದ ಪತ್ರದಲ್ಲಿ ತಿಳಿಸಿದ್ದೇನೆ, ಈಗ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ದಾವ ಆಸ್ತಿಗಳನ್ನು ಹೊರತುಪಡಿಸಿ ನನ್ನ ಮಾವನ ತಂದೆ ಸುಬ್ಬಪ್ಪ ರವರಿಗೆ ಬೇರೆ ಆಸ್ತಿಗಳು ಇರಲಿಲ್ಲ ಎಂದರೆ ಸರಿ.

3. ದಾವ ಐಟಂ ನಂಃ 1ನೇ ಆಸ್ತಿಯು ಮೂಲತಃ ನನ್ನ ಮಾವ ಕೊಂಗಳಪ್ಪ ರವರಿಗೆ ಸೇರಿದ ಆಸ್ತಿಯಾಗಿರುತ್ತದೆ. ನನ್ನ ಮಾವ ಕೊಂಗಳಪ್ಪ ರವರು ದಾವ ಐಟಂ ನಂಃ 1ನೇ ಆಸ್ತಿಯನ್ನು ಕ್ರಯಪತ್ರದ ಮೂಲಕ ಖರೀದಿ ಮಾಡಿರುತ್ತಾರೆ. ಸದರಿ ಕ್ರಯಪತ್ರವನ್ನು ಹಾಜರುಪಡಿಸಿರುತ್ತೇನೆ. ದಾವ ಐಟಂ ನಂಃ 1ನೇ ಆಸ್ತಿಯು ಸಹ ನನ್ನ ಮಾವ ಕೊಂಗಳಪ್ಪ ರವರ ಸ್ವಯಾರ್ಜಿತ ಆಸ್ತಿ ಅಲ್ಲ ಮತ್ತು ನಮ್ಮ ಪಿತ್ರಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ದಾವ ಐಟಂ ನಂಃ 1ನೇ ಆಸ್ತಿಯು ಪಿತ್ರಾರ್ಜಿತ ಆಸ್ತಿ ಎಂದು ನಿಪಿ 23 ರಿಂದ 25 ರಲ್ಲಿ ನಮೂದು ಇದೆ ಎಂದರೆ ಸರಿಯಲ್ಲ. ನನ್ನ ಮಾವ ಕೊಂಗಳಪ್ಪ ರವರು ವ್ಯವಸಾಯ ಮಾಡಿಕೊಂಡು ಜೀವನ ಮಾಡುತ್ತಿದ್ದರು ಎಂದರೆ ಸಾಕ್ಷಿಯು ವ್ಯವಸಾಯ ಮತ್ತು ವ್ಯಾಪಾರ ಎರಡನ್ನೂ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ಏನು ವ್ಯಾಪಾರ ಮಾಡುತ್ತಿದ್ದರು ಎಂಬ ಪ್ರಶ್ನೆಗೆ ಸಾಕ್ಷಿಯು ನನ್ನ ಮಾವ ಎತ್ತು ಗಾಡಿ ಇಟ್ಟುಕೊಂಡಿದ್ದರು, ಅದನ್ನು ಬಾಡಿಗೆಗೆ ಕೊಡುತ್ತಿದ್ದರು ಮತ್ತು ಸೌದೆ ಡಿಪೋ ಇಟ್ಟುಕೊಂಡು ವ್ಯಾಪಾರ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ಈ ಬಗ್ಗೆ ನನ್ನ ಬಳಿ ದಾಖಲೆಗಳು ಇರುವುದಿಲ್ಲ, ಆದರೆ ವ್ಯಾಪಾರ ಮಾಡುವುದನ್ನು ನೋಡಿದ್ದೆ. ನನ್ನ ಮಾವ ಕೊಂಗಳಪ್ಪ ರವರು ಯಾವುದೇ ಎತ್ತು ಗಾಡಿಯನ್ನು ಹೊಂದಿರಲಿಲ್ಲ ಮತ್ತು ಸೌದೆ ಡಿಪೋವನ್ನು ಸಹ ನಡೆಸುತ್ತಿರಲಿಲ್ಲ ಹಾಗೂ ವ್ಯವಸಾಯವನ್ನೇ ನಂಬಿ ಜೀವನ ಮಾಡುತ್ತಿದ್ದರು ಎಂದರೆ ಸರಿಯಲ್ಲ.

4. ನನ್ನ ಮಾವ ಕೊಂಗಳಪ್ಪ ರವರು ಅವರ ತಂದೆ ಸುಬ್ಬಪ್ಪ ರವರಿಗೆ ಹಿರಿಯ ಮಗ ಎಂದರೆ ಸರಿ. ಸುಬ್ಬಪ್ಪ ರವರಿಗೆ ನನ್ನ ಮಾವ ಕೊಂಗಳಪ್ಪ ರವರು ಹಿರಿಯ ಮಗನಾಗಿದ್ದರಿಂದ ಮತ್ತು ಒಟ್ಟು ಕುಟುಂಬದ ವ್ಯವಹಾರವನ್ನು ನನ್ನ ಮಾವ ಕೊಂಗಳಪ್ಪ ರವರೇ ನೋಡಿಕೊಳ್ಳುತ್ತಿದ್ದರಿಂದ ದಾವ ಐಟಂ ನಂಃ 4 ರಿಂದ 6ನೇ ಆಸ್ತಿಯನ್ನು ಒಟ್ಟು ಕುಟುಂಬದ ಜಮೀನಿನಲ್ಲಿ ಬಂದ ಆದಾಯದಿಂದ ಅವರ ಹೆಸರಿನಲ್ಲಿ ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. ದಾವ ಐಟಂ ನಂಃ 4 ರಿಂದ 6ನೇ ಆಸ್ತಿಯನ್ನು ಒಟ್ಟು ಕುಟುಂಬದ ಜಮೀನಿನಲ್ಲಿ ಬಂದ ಆದಾಯದಿಂದ ಖರೀದಿ ಮಾಡಿರುವುದರಿಂದ ಸದರಿ ಆಸ್ತಿಗಳಲ್ಲಿಯೂ ಸಹ ವಾದಿಗಳಿಗೆ ಹಕ್ಕು ಇದೆ ಎಂದರೆ ಸರಿಯಲ್ಲ. ನನ್ನ ಮಾವ ಕೊಂಗಳಪ್ಪ ರವರ ತಂದೆ ಸುಬ್ಬಪ್ಪ ರವರಿಗೆ ಸೇರಿದ ಒಟ್ಟು ಕುಟುಂಬದ ಆಸ್ತಿಗಳನ್ನು ವಾದಿಗಳು ಮತ್ತು ನಾವು ವಿಭಾಗ ಮಾಡಿಕೊಂಡಿರುವುದಿಲ್ಲ.

ಓಎಸ್ 125/2014

ಡಿಡಬ್ಲ್ಯೂ 1

ದಾವ ಆಸ್ತಿಗಳನ್ನು ವಾದಿಗಳಿಗೆ ತಿಳಿಯದ ಹಾಗೆ ಪ್ರತಿವಾದಿಗಳಾದ ನಾವು ನಮ್ಮ ಹೆಸರಿಗೆ ಖಾತೆ ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ದಾವ ಆಸ್ತಿಗಳನ್ನು ಕಬಳಿಸುವ ಸಲುವಾಗಿ ಸುಳ್ಳು ಸಾಕ್ಷಿ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದಾವ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳಾಗಿದ್ದು, ವಾದಿಗಳಿಗೂ ಸಹ ದಾವ ಆಸ್ತಿಗಳಲ್ಲಿ ಸಮಾನ ಹಕ್ಕು ಇದೆ ಎಂದರೆ ಸರಿಯಲ್ಲ. ದಾವ ಆಸ್ತಿಗಳಲ್ಲಿ ವಾದಿಗಳಿಗೆ ಭಾಗ ಕೊಡಬೇಕೆಂದು ದಾವ ಐಟಂ ನಂಃ1 ಹಾಗೂ 4 ರಿಂದ 6ನೇ ಆಸ್ತಿಗಳು ನನ್ನ ಮಾವ ಕೊಂಗಳಪ್ಪರವರ ಸ್ವಯಾರ್ಜಿತ ಆಸ್ತಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ದೀಪು ಎಂ.ಟಿ.)

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,

ಗುಂಡ್ಲುಪೇಟೆ